**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 32/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.03**

**ದಿನಾಂಕಃ 03.09.2025** **ಸಿಡಬ್ಲ್ಯೂ.02**

| | |
|---|---|
| ಹೆಸರು | ದೇವರಾಜ |
| ತಂದೆ ಹೆಸರು | ಬೀರಪ್ಪ |
| ವಯಸ್ಸು | 47 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಕೊಂಡಜ್ಜಿ ಗ್ರಾಮ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.3 ಮತ್ತು 4 ರವರ ಪರಿಚಯವಿದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದು ಸ್ಥಳ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ. 2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 11.06.2021 ರಂದು ಕೊಂಡಜ್ಜಿ ಪ್ರೌಢ ಶಾಲೆಯಲ್ಲಿ ಅಡುಗೆ ಎಣ್ಣೆ ಕಳ್ಳತನವಾದ ಬಗ್ಗೆ ಮಾಡಿರುತ್ತೇನೆ. ಶಾಲೆಯಲ್ಲಿ ಅಡುಗೆ ಕಳ್ಳತನವಾಗಿತ್ತು. ಸದರಿ ಸಂದರ್ಭದಲ್ಲಿ ಚಾಸಾ.3 ರವರು ನನ್ನೊಂದಿಗೆ ಇದ್ದರು. ಸದರಿ ಸಂದರ್ಭದಲ್ಲಿ ಚಾಸಾ.1 ರವರು ಅಡುಗೆ ಎಣ್ಣೆ ಕಳ್ಳತನವಾದ ಜಾಗವನ್ನು ತೋರಿಸಿದರು. ಸದರಿ ಸಂದರ್ಭದಲ್ಲಿ ಪೊಲೀಸರು ಪಂಚನಾಮೆ ಜರುಗಿಸಿ ಫೋಟೋ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ಈಗಾಗಲೇ ನಿಪಿ.3 ಮತ್ತು 4 ಎಂದು ಗುರುತಿಸಲಾಗಿದೆ. ಪೊಲೀಸರು ನನಗೆ ಪಂಚರಾಗಿ ಸಹಕರಿಸಲು ನೋಟಿಸ್ ನೀಡಿದ್ದರು. ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ.6 ಎಂದು ಸಾಕ್ಷಿಯ ಸಹಿಯನ್ನು ನಿಪಿ. 6(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಮದ್ಯಾಹ್ನ 1.45 ರಿಂದ 2.30 ಗಂಟೆ ಸಮಯದಲ್ಲಿ ಮಾಡಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್ ಬಿ ವಕೀಲರಿಂದಃ**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ಬೆಳಿಗ್ಗೆ 7.30 ರಿಂದ 9.00 ರಿಂದ 9.30 ರವರೆಗೆ ಜಮೀನಿಗೆ ಹೋಗಿ ಬಂದು ಮತ್ತೆ ಸಾಯಂಕಾಲ 4.30 ರಿಂದ ರಾತ್ರಿ 7.30 ರಿಂದ 8.00 ಗಂಟೆವರೆಗೆ ಜಮೀನಿಗೆ ಹೋಗುತ್ತೇನೆ. ನನ್ನ ಮನೆ ಮತ್ತು ಶಾಲೆಗೆ ಸುಮಾರು 100 ಮೀಟರ್ ಅಂತರವಿದೆ. ಶಾಲೆಯ ಅಕ್ಕಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ. ನಾನು ಶಾಲೆಯಲ್ಲಿ ಯಾವುದೇ ಸದಸ್ಯನಾಗಿಲ್ಲ. ನಾನು ಶಾಲೆಗೆ

ಸಂಬಂದಿಸಿದವನಲ್ಲ. ನಾನು ರಸ್ತೆಯಲ್ಲಿರಬೇಕಾದರೆ ನನಗೆ ಪಂಚನಾಮೆಗೆ ಸಾಕ್ಷಿಯಾಗಲು ನೋಟಿಸ್ ನೀಡಿರುತ್ತಾರೆ. ಸದರಿಯವರು ಹೆಸರು ಪದನಾಮೆ ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ನೋಟಿಸ ನೀಡಿದ ಸಂದರ್ಭದಲ್ಲಿ ಮದ್ಯಾಹ್ನ 1.00 ಗಂಟೆಯಾಗಿತ್ತು. ನಾನು ನೋಟಿಸನಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡಿಲ್ಲ. ನನಗೆ ನೋಟಿಸ್ ಜಾರಿ ಮಾಡಿದ ಸ್ಥಳದಿಂದ ಶಾಲೆಗೆ ಸುಮಾರು 20 ಮೀಟರ್ ಅಂತರವಿದೆ. ನಾನು ಸ್ಥಳಕ್ಕೆ ಹೋದಾಗ ಸುಮಾರು 7-8 ಜನ ಇದ್ದರು. ಸದರಿಯವರೆಂದರೆ, ನಾನು ಅಂಜಿನಪ್ಪ, ನಾಗರತ್ನಮ್ಮ, ಹೆಚ್ ಸಿ-ಮಂಜುಳಮ್ಮ, ಶಾಲಾ ಮುಖ್ಯೋಪಾದ್ಯಾಯರು ಭದ್ರೇಶ ರವರು ಇದ್ದರು. ನಾನು ಠಾಣೆಗೆ ಆಗಾಗ ಹೋಗುತ್ತೇನೆ ಎಂದರೆ ಸರಿಯಲ್ಲ. ನನಗೆ ಪೊಲೀಸರು ಪರಿಚಯ ಎಂದರೆ ಸರಿ. ಸ್ಥಳಕ್ಕೆ 4 ಜನ ಪೊಲೀಸರು ಬಂದಿದ್ದರು. ಹೆಚ್ ಸಿ-ಮಂಜುಳಮ್ಮ ನವರನ್ನು ಹೊರತುಪಡಿಸಿ ಸ್ಥಳಕ್ಕೆ ಬಂದ ಬೇರೆ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ನಿಪಿ.2 ಪಂಚನಾಮೆಯಲ್ಲಿ ಬರೆದಿರುವ ಸಂಗತಿಗಳನ್ನು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. ನಿಪಿ.2 ಕ್ಕೆ ಪೊಲೀಸರು ಸಹಿ ಮಾಡು ಎಂದ ಮೇರೆಗೆ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿಯು ವಿಚಾರ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಎಣ್ಣೆ ಪದಾರ್ಥ ಬಿಟ್ಟು ಬೇರೆ ಯಾವ ಪದಾರ್ಥಗಳು ಇದ್ದವು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನಿಪಿ.4 ರಲ್ಲಿ ಯಾವುದೇ ದವಸ ಧಾನ್ಯಗಳು ಕಾಣುತ್ತಿಲ್ಲ ಎಂದರೆ ಸರಿ. ನಿಪಿ.4 ರಲ್ಲಿ ಇನ್ನುಳಿದ 3 ಜನ ಪೊಲೀಸರು ಕಾಣುತ್ತಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಮಹಜರ್ ಗೆ ಉಳಿದ ಪೊಲೀಸ್ ಪೇದೆ ಸಹಿ ಮಾಡಿರುತ್ತಾರಾ ಅಥವಾ ಇಲ್ಲ ಎಂದು ನನಗೆ ಮಾಹಿತಿ ಇಲ್ಲ. ಛಾಯ ಚಿತ್ರಗಳನ್ನು ಪೊಲೀಸರು ತೆಗೆದಿರುತ್ತಾರೆ. ಸದರಿ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಸದರಿ ಛಾಯ ಚಿತ್ರಗಳನ್ನು ಮೊಬೈಲ್ ಕ್ಯಾಮೆರಾ ಸಹಾಯದಿಂದ ತೆಗೆದಿರುತ್ತಾರೆ. ಮಹಜರ್ ಗೆ ಶಾಲಾ ಮುಖ್ಯೋಪಾದ್ಯಾಯರು ಮಾಡಿದ ಹಾಗೂ ಮಾಡದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನಗೆ ಪೊಲೀಸರು ಪರಿಚಯವಿದ್ದುದರಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ**

2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದು, ವಿನಂತಿ ಮೇರೆಗೆ ಅದನ್ನೇ ಅಳವಡಿಸಿಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ